
6



1

# ಕಿನ್ನರಿ ನುಡಿಸೋಣ ಬಾ

# ಕೋಲಾಟದ ಪದಗಳು



ಕೋಲು ಕೋಲೆ ಕೋಲು ಕೋಲಣ್ಣಾ ಕೋಲೆ
ಸುವ್ವನಾರಿ ಕಮಲೇ ಸುರು ಹೊನ್ನು ಕೋಲೆ
ಮತ್ತೆ ಕೋಲ್ವೊಡೆದು ಮತ್ಯಾರ ನೆನೆದೇವು
ಎಳ್ಳು ಜೀರಿಗೆ ಬೆಳೆಯೋಳ ಕೋಲೆ
ಎಳ್ಳು ಜೀರಿಗೆ ಬೆಳೆಯೋಳ ಭೂತಾಯಿ
ಮತ್ತೆ ಕೋಲ್ವೊಡೆದು ನೆನೆದೇವು ಕೋಲೆ
ಈಗಲೇ ಕೋಲ್ವೊಡೆದು ಈಗ್ಯಾರ ನೆನೆದೇವು
ಕಲ್ಲು ಕಾವೇರಿ ಕಪಿನೀಯ ಕೋಲೆ
ಕಲ್ಲು ಕಾವೇರಿ ಕಪಿನೀಯ ಬಸವಣ್ಣ
ಈಗನೆ ಕೋಲ್ವೊಡೆದು ನೆನೆದೇವು ಕೋಲೆ
ಎಂಟಾಳ ವಳಗೇ ಜಂಟೀಲಿ ಬರುವೋಳೆ
ಗಂಟೇಯಗತಿಗೇ ಕುಣಿಯೋಳೆ ಕೋಲೆ
ಗಂಟೇಯ ಗತಿಗೇ ಕುಣಿಯೋಳೆ ಶಾರದೇ
ಗಂಟಲತೊಡರ ಬಿಡಿಸವ್ವ ಕೋಲೆ

❒ ಈ ಹಾಡನ್ನು ರಾಗವಾಗಿ ಹಾಡಿ ಆಸ್ವಾದಿಸಿರಿ. ಗುಂಪಿನಲ್ಲಿ ಹಾಡಿ ಕುಣಿಯಿರಿ.

# ಚೆಲುವಯ್ಯ ಚೆಲುವೊ ತಾನಿತಂದನ

ಚೆಲುವಯ್ಯ ಚೆಲುವೋ ತಾನಿ ತಂದನ್ನ
ಚಿನ್ಮಯರೂಪೇ ಕೋಲಣ್ಣ ಕೋಲೆ

ಬೆಟ್ಟದ ಮ್ಯಾಗಳ್ ಜಲ್ಲೆ ಬಿದಿರು
ಬೇಲಿ ಮ್ಯಾಗಳ್ ಸೋರೆ ಬುರುಡೆ
ಲೋಲು ಕಿನ್ನರಿ ನುಡಿಸೋನ್ ಯಾರಯ್ಯಾ ।।ಚೆಲುವಯ್ಯ।।

ಲೋಲು ಕಿನ್ನರಿ ನುಡಿಸುತ್ತಾನೆ
ಕೇರಿ ಕೇರಿ ತಿರುಗುತ್ತಾನೆ
ನಮ್ಮ ಕೇರೀಗ್ ಯಾಕೆ ಬರುವಲ್ಲೊ ।।ಚೆಲುವಯ್ಯ।।

ನಮ್ಮ ಕೇರೀಗ್ ಬಂದರೀಗ
ಕರಿಯ ಕಂಬ್ಳಿ ಗದ್ದೇನ್ ಹೂಡಿ
ತಂದು ಕೊಡುವೇನ್ ಗಂಧವೀಳ್ಯವಾ ।।ಚೆಲುವಯ್ಯ।।
ಗಂಧನಾದ್ರು ಪೂಸಿಕೊಳ್ಳಿ
ವೀಳ್ಯನಾದ್ರು ಮೆದ್ದುಕೊಳ್ಳಿ
ಬಂದ ಕಾರ್ಯ ಹೇಳಿ ದಮ್ಮಯ್ಯ ।।ಚೆಲುವಯ್ಯ।।



ಬಂದ ಕಾರ್ಯ ಹೇಳುವುದಕ್ಕೆ
ಮಂತ್ರಿ ಪ್ರಧಾನಿ ಬೇಕು
ಕೊಡುವ ಮನೆಯ ತೋರೆ ನೀ ಹೆಣ್ಣೆ ।।ಚೆಲುವಯ್ಯ।।

ಆಗದೋನೆ ಭೋಗದೋನೆ
ನಾಗರ ನಡು ಕಟ್ಟಿದೋನೆ
ಕೋಗಿಲ್ಡಂಗೆ ಕೂಗುತೀಯಲ್ಲೊ ।।ಚೆಲುವಯ್ಯ।।

ನನ್ನ ನಿನ್ನ ಮನೆಯ ಮುಂದೆ
ಸಣ್ಣದೊಂದು ಬೇವಿನ ಮರ
ಸಂಜೇಲ್ ಮುಂಜೇಲ್ ಬಂದು ಹೋಗಯ್ಯ ।।ಚೆಲುವಯ್ಯ।।

ಊರಿಗಂತ ನೀನು ಬಾರೊ
ನೀರಿಗಂತ ನಾನು ಬರ್ತೀನ್
ಕುಂತು ನಿಂತು ಮಾತನಾಡೋಣ ।।ಚೆಲುವಯ್ಯ।।

ಎತ್ತಿಗಂತ ನೀನು ಬಾರೋ
ಎಮ್ಮೆಗಂತ ನಾನು ಬರ್ತೀನ್
ಕುಂತು ನಿಂತು ಮಾತನಾಡೋಣ ।।ಚೆಲುವಯ್ಯ।।

- ಈ ಪದ್ಯವನ್ನು ಹಾಡಿರಿ.
- ಈ ಪದ್ಯದಲ್ಲಿ ನಿಮಗಿಷ್ಟವಾದ ಸಾಲುಗಳನ್ನು ಗುರುತಿಸಿ ಸ್ವಾರಸ್ಯ ಬರೆಯಿರಿ.
- ಇಲ್ಲಿ "ಕೋಲಾಟದ ಪದಗಳು" ಪದ್ಯದ ಆಸ್ವಾದನ ಟಿಪ್ಪಣಿಯನ್ನು ಕೊಡಲಾಗಿದೆ. ಇದನ್ನು ಓದಿರಿ. "ಚೆಲುವಯ್ಯ ಚೆಲುವೋ ತಾನಿತಂದನ" ಪದ್ಯದ ಆಸ್ವಾದನ ಟಿಪ್ಪಣಿಯನ್ನು ಬರೆದು ಮಂಡಿಸಿರಿ.

'ಕೋಲು ಕೋಲೆ ಕೋಲು ಕೋಲಣ್ಣಾ ಕೋಲೆ' ಒಂದು ಕೋಲಾಟದ ಗೀತೆಯಾಗಿದೆ. ಇಲ್ಲಿ ಎರಡು ಸಾಲುಗಳ ಪಲ್ಲವಿ ಮತ್ತು ಮೂರು ಪದ್ಯಗಳಿವೆ. ಒಂದು ಪದ್ಯದಲ್ಲಿ ನಾಲ್ಕು ಸಾಲುಗಳಿವೆ. ಜಾನಪದದಲ್ಲಿ ಸಾಕಷ್ಟು ಕೋಲಾಟದ ಪದ್ಯಗಳಿವೆ.

ಜನಪದರು ಪ್ರಕೃತಿಯನ್ನು ಪೂಜಿಸುತ್ತಾರೆ. ಭೂಮಿಯನ್ನು ತಾಯಿ, ದೇವರೆಂದು ತಿಳಿಯುತ್ತಾರೆ. ಎಲ್ಲ ರೀತಿಯ ಕೃಷಿಗೆ ಆಧಾರವಾದ ಭೂಮಿತಾಯಿಯನ್ನು ಗೌರವದಿಂದ ನೆನೆಯುತ್ತಾರೆ. ಅದೇ ರೀತಿ ನೀರಿಗೆ ಆಶ್ರಯವಾಗಿರುವ ನದಿಗಳನ್ನು ಸ್ಮರಿಸಿಕೊಳ್ಳುತ್ತಾರೆ. ನಮ್ಮ ಗಂಟಲ ತೊಡರನ್ನು ಬಿಡಿಸಿ ಒಳ್ಳೆಯ ಮಾತುಗಳನ್ನು ಆಡುವಂತೆ ಮಾಡುವುದಕ್ಕಾಗಿ ವಿದ್ಯಾದೇವತೆಯಾದ ಶಾರದೆಗೆ ನಮಿಸುತ್ತಾರೆ.

ಈ ಪದ್ಯವು ಸರಳವಾಗಿದೆ. ಹಾಡಲು ಸುಲಭ. 'ಕೋಲು ಕೋಲಣ್ಣ ಕೋಲೆ' ಮತ್ತೆ ಮತ್ತೆ ಹಾಡಲು ಖುಷಿಕೊಡುತ್ತದೆ. ರಚನೆ, ರಾಗ, ತಾಳ, ಲಯ ಅರ್ಥಗಳಿಂದ ಮನಸ್ಸನ್ನು ತುಂಬುತ್ತದೆ.

- ❐ ಕೋಲಾಟದ ಪದಗಳನ್ನು ಸಂಗ್ರಹಿಸಿ ಹಾಡಿರಿ, ಸಮೂಹ ನೃತ್ಯ ರೂಪದಲ್ಲಿ ಪ್ರದರ್ಶಿಸಿರಿ.
- ❐ ನಮ್ಮ ಜನಪದ ಕಲೆಗಳ ಹಾಡುಗಳನ್ನು ಸಂಗ್ರಹಿಸಿರಿ.

'ಚೆಲುವಯ್ಯ ಚೆಲವೋ' ಪದ್ಯದಲ್ಲಿ ಬಳಸಲಾದ ಗ್ರಾಮ್ಯ ಪದಗಳಿಗೆ ಶಿಷ್ಟರೂಪಗಳನ್ನು ಕೆಳಗೆ ಕೊಡಲಾಗಿದೆ. ಇದೇ ರೀತಿಯ ಇತರ ಗ್ರಾಮ್ಯ ಪದಗಳನ್ನು ಸಂಗ್ರಹಿಸಿ ಅವುಗಳ ಶಿಷ್ಟರೂಪಗಳನ್ನು ಬರೆಯಿರಿ.

| | | |
|---|---|---|
| ಕೇರೀಗ್ | – | ಕೇರಿಗೆ |
| ಕಂಬ್ಳಿ | – | ಕಂಬಳಿ |
| ಗದ್ಗೇನ್ | – | ಗದ್ದಿಗೆಯನ್ನು |
| ಕೊಡುವೇನ್ | – | ಕೊಡುವೆನು |
| ಮುಂಜೇಲ್ | – | ಮುಂಜಾನೆ |
| ವೀಳ್ಯನಾದ್ರು | – | ................ |
| ನುಡಿಸೋನ್ | – | ................ |
| ಸಂಜೇಲ್ | – | ................ |
| ಬರ್ತೀನ್ | – | ................ |

❖❖❖

# ಕೋಟಿ ಚೆನ್ನಯ

(ಕಥಾಸಂದರ್ಭ: ದಕ್ಷಿಣಕನ್ನಡ ಜಿಲ್ಲೆಯ ಪುತ್ತೂರು ತಾಲೂಕಿನ ಪಡುಮಲೆಯಲ್ಲಿ ಸುಮಾರು ಮುನ್ನೂರು ವರ್ಷಗಳ ಹಿಂದೆ ಪೆರುಮಾಳ ಬಲ್ಲಾಳನೆಂಬವನು ಅರಸನಾಗಿದ್ದನು. ಆತನಿಗೆ ಬೇಟೆಯ ಸಂದರ್ಭದಲ್ಲಿ ಕಾಲಿಗೆ ಚುಚ್ಚಿದ ಮುಳ್ಳಿನ ಗಾಯವನ್ನು ಯಾರಿಂದಲೂ ಗುಣಪಡಿಸಲಾಗಲಿಲ್ಲ. ಆಗ ತುಂಬುಗರ್ಭಿಣಿಯಾದ ದೇಯಿ ಬೈದ್ಯೆತಿ ಅರಮನೆಗೆ ಬಂದು ಅರಸನ ಗಾಯಕ್ಕೆ ಔಷಧಿಯನ್ನು ನೀಡಿ ಗುಣಪಡಿಸುತ್ತಾಳೆ. ಅರಮನೆಯಲ್ಲೆ ಅವಳು ಅವಳಿ ಮಕ್ಕಳಿಗೆ ಜನ್ಮ ನೀಡುತ್ತಾಳೆ. ಶಿಶುಗಳಿಗೆ ಕೋಟಿ ಚೆನ್ನಯರೆಂದು ನಾಮಕರಣವಾಗುತ್ತದೆ. ಕೋಟಿಚೆನ್ನಯರು ಎಳೆಯ ಮಕ್ಕಳಾಗಿರುವಾಗಲೇ ದೇಯಿ ಬೈದ್ಯೆತಿ ಸಾವನ್ನಪ್ಪುತ್ತಾಳೆ. ಕೋಟಿ ಚೆನ್ನಯರು ಮಾವನಾದ ಸಾಯಣ ಬೈದ್ಯನ ಆರೈಕೆಯಲ್ಲಿ ಅರಸನು ಉಂಬಳಿಯಾಗಿ ಕೊಟ್ಟ ಗದ್ದೆಯಲ್ಲಿ ಬೇಸಾಯವನ್ನು ಮಾಡುತ್ತಾ ದಿನಗಳೆಯುತ್ತಾರೆ. ಜೊತೆಯಲ್ಲಿ ಯುದ್ಧವಿದ್ಯೆಗಳನ್ನು ಕಲಿಯುತ್ತಾರೆ. ಗದ್ದೆಗೆ ನೀರುಬಿಡುವ ವಿಚಾರದಲ್ಲಿ ಅರಸನ ಮಂತ್ರಿಯಾದ ಬುದ್ಧಿವಂತನಿಗೂ ಕೋಟಿ ಚೆನ್ನಯರಿಗೂ ಮಾತಿಗೆ ಮಾತು ಬೆಳೆದು ಚೆನ್ನಯನು ಬುದ್ಧಿವಂತನನ್ನು ಕೊಲ್ಲುತ್ತಾನೆ. ಆ ಕೊಲೆ ಆರೋಪವನ್ನು ವಿಚಾರಣೆ ಮಾಡಿದ ಪೆರುಮಾಳ ಬಲ್ಲಾಳ ಕೋಟಿ ಚೆನ್ನಯರನ್ನು ತನ್ನ ರಾಜ್ಯದಿಂದ ಗಡಿಪಾರು ಮಾಡುತ್ತಾನೆ. ಊರೂರು ಅಲೆದಾಡಿದ ಕೋಟಿ ಚೆನ್ನಯರು ಕೊನೆಗೆ ಎಣ್ಮೂರಿನಲ್ಲಿರುವ ತಮ್ಮ ಅಕ್ಕ ಕಿನ್ನಿದಾರುವಿನ ಮನೆಗೆ ಬರುತ್ತಾರೆ. ಅನಂತರ ಎಣ್ಮೂರಿನ ಅರಸನಾದ ದೇವ ಬಲ್ಲಾಳ ಕೋಟಿ ಚೆನ್ನಯರಿಗೆ ಆಶ್ರಯ ನೀಡುತ್ತಾನೆ.)

ತುಲಾಮಾಸವು ಕಳೆದು ವೃಶ್ಚಿಕ ಮಾಸವು ತಲೆದೋರಿ ಹತ್ತುದಿನಗಳು ದಾಟಿಹೋದುವು. ಗದ್ದೆಗಳಲ್ಲಿದ್ದ ಬೆಳೆ ಒಕ್ಕಲಿಗನ ಅಂಗಳದಲ್ಲಿ ಮೊದಲೇ ಬೆಚ್ಚಗೆ ಸೇರಿಕೊಂಡಿತ್ತು. ನೀರಿದ್ದ ಕಡೆಗಳಲ್ಲಿ ಸುಗ್ಗಿಯ ಬೆಳೆಯು ಒಂದೂವರೆ ಗೇಣು ಮೇಲೆ ಬಂದಿತ್ತು. ಹಿಂಗಾರು ಮಳೆಯು ಬಾರದೆ ಆಕಾಶವು ತಿಳಿಯಾಗಿತ್ತು. ಮಳೆಗಾಲದಲ್ಲಿ ಉಡುಗಿ



ಹೋಗಿದ್ದ ಕ್ರಿಯಾಕಲಾಪಗಳು ಈ ಮೊದಲೇ ಸರಾಗವಾಗಿ ನಡೆಯತೊಡಗಿದವು. ಬೆಟ್ಟದ ತೊರೆಗಳಲ್ಲಿ ನೀರು ಕಡಿಮೆಯಾದುದರಿಂದ, ಹೋರಾಟದ ಎತ್ತುಗಳಿಂದ ತುಳುನಾಡಿಗೆ ಸರಕು ಸಾಗಾಟ ಪ್ರಾರಂಭವಾಗಿತ್ತು. ತುಳುನಾಡಿನ ಅತ್ಯಂತ ಪ್ರಸಿದ್ಧವಾದ ಸುಬ್ರಹ್ಮಣ್ಯ ಜಾತ್ರೆಯು ಸಮೀಪಿಸಿತ್ತು.

ಜಾತ್ರೆಗೆ ನಾಲ್ಕು ದಿವಸ ಮುಂಚಿತವಾಗಿ ಪೆರುಮಾಳ ಬಲ್ಲಾಳನು ಮಂದಿಮಾರ್ಬಲದೊಡನೆ ಪಡುಮಲೆಯಿಂದ ತೆರಳಿ ಪೆರ್ಲಂಪಾಡಿಯ ಮಾರ್ಗವಾಗಿ ಹೋಗಿ ಎರುಕಡಪಿನ ಹತ್ತಿರ ಬಂದು ಇಳಿದನು. ಪಂಜದ ಕೇಮರ ಬಲ್ಲಾಳನ ಜನಗಳು ಸಾಮಾನು ಸರಂಜಾಮನ್ನು ಶೇಖರಿಸಿಕೊಂಡು ಕಡವಿನ ಆಚೆಗೆ ಇದ್ದರು. ಕೇಮರನ ಇನ್ನೊಂದು ದಂಡು ಎಣ್ಮೂರಿನ ಸರಹದ್ದಿನ ಕಂಡಿಕಣಿವೆಗಳನ್ನು ಕಟ್ಟಿ, ರಸ್ತುಮುಸ್ತೈದೆಗಳು ಎಣ್ಮೂರಿಗೆ ಹೋಗುವುದನ್ನು ನಿಲ್ಲಿಸಿಬಿಟ್ಟಿತ್ತು. ಈ ಸೈನ್ಯವು ಕಳ್ಳದಾರಿಯಾಗಿ ಬಂದು ತನ್ನ ರಾಜ್ಯದ ಗಡಿಗಳಲ್ಲಿ ಬಲಕಾಯಿಸಿ ನಿಂತಿದ್ದ ಸುದ್ದಿಯು ಜಾತ್ರೆಯ ಮುಂಚಿನ ದಿವಸ ಎಣ್ಮೂರಿನ ದೇವಬಲ್ಲಾಳನಿಗೆ ಗೊತ್ತಾಗಿ ಅವನು 500 ಮಂದಿಯನ್ನು ಎಣ್ಮೂರು ದೇವಸ್ಥಾನದ ಮುಂದುಗಡೆಯ ಬೈಲಿನಲ್ಲಿ ನಿಲ್ಲಿಸಿ, ಜಗಳ ಮಾಡುವುದಕ್ಕೆ ಸಿದ್ಧವಾದನು.

ಯುದ್ಧದ ಸಿದ್ಧತೆಯನ್ನು ಕಂಡು ಕೇಳಿದ ಜನಗಳು ತಮ್ಮ ಬದುಕು ಬಾಳನ್ನೂ ದನಕರುಗಳನ್ನೂ ದೂರಕ್ಕೆ ಸಾಗಿಸಲು ಪ್ರಯತ್ನಿಸಿದರು. ಚಿನ್ನ ಬೆಳ್ಳಿ ಇದ್ದವರು ಅದನ್ನು ನೆಲಮರೆ ಮಾಡಿಕೊಂಡು ತಮ್ಮ ಮನೆಗಳನ್ನು ಕಾದುಕೊಂಡಿದ್ದರು. ಮರ್ದಾಳ ಸೀಮೆಯ ರೈತರು ಲೂಟಿಯ ಭಯದಿಂದ ತಮ್ಮ ಹೆಂಡತಿ ಮಕ್ಕಳು ಆದಿಯಾಗಿ ಸರ್ವಸ್ವವನ್ನೂ ಕೊಕ್ಕಡದ ಮಾರ್ಗವಾಗಿ ಸಾಗಿಸಿಬಿಟ್ಟರು.

ಮಾರ್ಗಶಿರ ಶುದ್ಧ ಷಷ್ಠಿಯ ದಿನ ಸೂರ್ಯೋದಯಕ್ಕೆ ಸರಿಯಾಗಿ ದೇವ ಬಲ್ಲಾಳನು ಕೋಟಿ ಚೆನ್ನಯರಿಗೆ ತಾಂಬೂಲವನ್ನು ಕೊಟ್ಟು ತನ್ನ ಸೈನ್ಯಕ್ಕೆ ಅವರನ್ನು ಮುಖಂಡರನ್ನಾಗಿ ಮಾಡಿ, ಅವರ ಆಜ್ಞಾನುಸಾರವಾಗಿ ನಡೆಯುವುದಕ್ಕೆ ಅನುವಾದನು. ಕೋಟಿ ಚೆನ್ನಯರು ಸೈನ್ಯದ ಜನದಲ್ಲಿ ಬೀಡಿನ ಪಹರೆಗೂ, ಎಣ್ಮೂರಿನ ಚೌಸುತ್ತಿನ ಕಾವಲಿಗೂ, ಬಲ್ಲಾಳನ ಚಾಕರರಿಗೂ ಬೇಕಾದಷ್ಟು ಮಂದಿಯನ್ನು ನಿಲ್ಲಿಸಿದರು. ಉಳಿದ ಅರೆವಾಸಿ ಮಂದಿಯನ್ನು ತಮ್ಮ ಸಂಗಡ ಕೂಡಿಕೊಂಡು ಎಣ್ಮೂರು ದೇವಸ್ಥಾನದ ದಾರಿಯನ್ನು ಹಿಡಿದರು.

ಹೊತ್ತು ಎರಡು ಮಾರು ಏರುವಷ್ಟರಲ್ಲಿ ಇತ್ತಂಡದವರೂ ಎದುರು ಬೀಳಲು, ಜಗಳಕ್ಕೆ ಪ್ರಾರಂಭವಾಯಿತು. ಇಕ್ಕಡೆಯವರು ಎಸೆದ ಬಾಣಗಳಿಂದ ಅನೇಕರು ಮಡಿದುಬಿದ್ದರು. ಮೂರುಮುಕ್ಕಾಲು ಗಳಿಗೆಯಲ್ಲಿ ಪಂಜದ ಕೇಮರ ಬಲ್ಲಾಳನು ಏರಿದ್ದ ಕುದುರೆಯ ಕಣ್ಣಿಗೆ ಬಾಣವು ತಗಲಿ, ಬಲ್ಲಾಳನು ಕುದುರೆಯಿಂದ ಕೆಳಕ್ಕೆ ಬಿದ್ದು, ಯುದ್ಧರಂಗದಿಂದ ಓಡಿಹೋದನು. ಎಣ್ಮೂರಿನ ಕಡೆ ಯುದ್ಧ ಮಾಡುತ್ತಿದ್ದ ಮಂಜುಹೆಗ್ಗಡೆ ಎಂಬ ವೀರನು ಏಟು ತಗಲಿ ಅಲ್ಲಿಯೇ ಮಡಿದುದನ್ನು ಕಂಡು ಎಣ್ಮೂರಿನವರು ಹಿಮ್ಮೆಟ್ಟಿ ಪಲಾಯನದ ಮಾರ್ಗವನ್ನು ನೋಡುತ್ತಿದ್ದರು. ಆ ಹೊತ್ತಿಗೆ ಸರಿಯಾಗಿ ಪೆರುಮಾಳ ಬಲ್ಲಾಳನೂ ಚೆಂದುಗಿಡಿಯೂ ತಮ್ಮ ತಮ್ಮ ಕುದುರೆಗಳನ್ನು ದೌಡಾಯಿಸಿಕೊಂಡು ಮುಂದೊತ್ತಿ ಬಂದರು. ಎಣ್ಮೂರಿನವರು ಕಾಲಿಗೆ ಬುದ್ಧಿ ಹೇಳತೊಡಗಿದರು.

ಎಣ್ಮೂರಿನ ಜನಗಳು ಓಡಿಹೋಗುವುದನ್ನು ಕೋಟಿ ಚೆನ್ನಯರು ಕಂಡು ತಮ್ಮ ಕತ್ತಿಯನ್ನು ಜಳಪಿಸುತ್ತ, ಇದಿರಿಸಿಕೊಂಡು ಬಂದವರನ್ನು ತಮ್ಮ ಖಡ್ಗಕ್ಕೆ ಆಹುತಿಯನ್ನಾಗಿ ಮಾಡಿದರು. ಓಡಿಹೋಗುವವರನ್ನು ಮುಖ ತಿರುಹಿ ಯುದ್ಧ ಮಾಡಬೇಕೆಂದು ಹುರಿಗೊಳಿಸುತ್ತ, ಬಾಕಿಮಾರು ಗದ್ದೆಗೆ ಬಂದರು. ಅಷ್ಟರಲ್ಲಿ ಶತ್ರುಸೈನ್ಯದ ಇನ್ನೂರು ಮಂದಿ ಅವರನ್ನು ಮುಸುಕಿ ಮುತ್ತಿದರು.

ತಮ್ಮನ್ನು ಬಳಸಿಕೊಂಡು ಬರುತ್ತಿದ್ದ ಹಗೆಯವರನ್ನು ಕಂಡು ಕೋಟಿ ಚೆನ್ನಯರು ಬೆನ್ನಿಗೆ ಬೆನ್ನು ಕೊಟ್ಟು

ನಿಂತು, ಸುತ್ತಮುತ್ತಲಿನಿಂದ ಏಟುಗಳನ್ನು ಒಂದು ಗಳಿಗೆಯ ವರೆಗೆ ತಪ್ಪಿಸಿಕೊಂಡರು. ತರುವಾಯ ಅವರಿಬ್ಬರೂ ಕಬ್ಬಿನ ತೋಟಕ್ಕೆ ಬಿದ್ದ ಮರಿಯಾನೆಗಳಂತೆಯೂ, ಕುರಿ ಹಿಂಡನ್ನು ನುಗ್ಗಿದ ಹುಲಿಮರಿಗಳಂತೆಯೂ ಶತ್ರುಗಳನ್ನು ಕೈಗೆ ಸಿಕ್ಕಂತೆ ಕೊಲ್ಲುತ್ತ ರಣಭಯಂಕರವಾಗಿ ಯುದ್ಧ ಮಾಡುತ್ತಿದ್ದರು. ಅಷ್ಟರಲ್ಲಿ ಒಂದು ಚಿತ್ರಬಾಣವು ಕೋಟಿಯ ಮರ್ಮಸ್ಥಾನಕ್ಕೆ ತಗಲಿ ಅವನನ್ನು ಕಲ್ಲುಗೊಂಬೆಯಂತೆ ಮಾಡಿಬಿಟ್ಟಿತು.

ಅದನ್ನು ಕಂಡು ಚೆನ್ನಯನು " ಅಣ್ಣಾ! ಕಾಲು ತಿರುಗಿಸಿ, ಕಾಲು ತಿರುಗಿಸಿ" ಎಂದು ಚೀರಿದನು.

ಕೋಟಿ "ತಮ್ಮಾ, ತಲೆಗೆ ಏರಿದೆ ಚಿತ್ರಬಾಣ; ಎದೆಯನ್ನು ಸೀಳಿದೆ ಶಿಳೀಮುಖ; ಕಣ್ಣಿಗೆ ಬೀಸಿದೆ ಅರಸಿನ ಹುಡಿ" ಎಂದು ಹೇಳಿ ಕೂಡಲೇ "ತಮ್ಮಾ, ನೀನು ಯಾವಾಗಲೂ ಹಿಂದುಮುಂದು ನೋಡುವುದಿಲ್ಲ, ಅಕೋ! ನಿನ್ನ ಬೆನ್ನ ಹಿಂದೆ" ಎಂದು ಕೈಸನ್ನೆ ಮಾಡಿದನು.

ಆ ಹೊತ್ತಿಗೆ ಸರಿಯಾಗಿ ಚೆಂದುಗಿಡಿಯು ಚೆನ್ನಯನ ಹಿಂದೆ ಕಳ್ಳ ಹೆಜ್ಜೆಯಿಂದ ನುಸುಳಿಕೊಂಡು ಬಂದು ತನ್ನ ಕತ್ತಿಯನ್ನು ಆತನ ಕೊರಳಿಗೆ ಇಟ್ಟಿದ್ದನು.

ತಕ್ಷಣವೇ ಚೆನ್ನಯನು ಮೋರೆಯನ್ನು ತಿರುಗಿಸಿ, ಇದ್ದಲ್ಲಿಂದ ಪುಟನೆಗೆದು, "ಅಣ್ಣಾ! ಇದು ನೆಗಳೆ. ಹರಿದು ಬಂದು ಕಚ್ಚುವ ಸ್ವಭಾವದ್ದು, ಕಣ್ಣಿಂದ ಕಾಣಲಿಕ್ಕಿಲ್ಲ. ಕೈಯಿಂದ ಮುಟ್ಟಲಿಕ್ಕಿಲ್ಲ ಎಂಬಂತೆ ಹಿಂದುಗಡೆಯಿಂದ ಬಂದಿದೆ" ಎಂದು ಹೇಳಿ ತುಂಟ ಕುದುರೆಯಂತೆ ಕಾಲಿನಿಂದ ಒದೆದುಬಿಟ್ಟನು. ಆ ಏಟು ಸಿಡಿಲಿನಂತೆ ಚೆಂದುಗಿಡಿಯ ಕಪಾಲಕ್ಕೆ ತಾಗಿ ಅವನು ಅಲ್ಲಿಯೇ ಕಾಯಬಿಟ್ಟು ಸಂದನು.

ಚೆಂದುಗಿಡಿಯು ಸತ್ತದ್ದೇ ತಡ, ಅವನ ಸೈನಿಕರು ಕೊಳುಗುಳವನ್ನು ಬಿಟ್ಟು ಓಡತೊಡಗಿದರು. ಹೊತ್ತು ನೆತ್ತಿಗೆ ಬರುವಷ್ಟರಲ್ಲಿ ಯುದ್ಧವು ಮುಗಿದಿತ್ತು. ಯುದ್ಧದ ಜಯಧ್ವನಿಯು ಎಣ್ಮೂರು ಬೀಡಿಗೆ ಮುಟ್ಟಿತ್ತು. ಆಗ ದೇವ ಬಲ್ಲಾಳನು ಆ ವೀರರನ್ನು ಮಹಾಸಂಭ್ರಮದಿಂದ ಕಾಣುವುದಕ್ಕಾಗಿ ಪಟ್ಟದ ಜೋಡಿ ಕುದುರೆಗಳನ್ನೂ



ಎರಡು ಪಲ್ಲಕ್ಕಿಗಳನ್ನೂ ಸಿಂಗರಿಸಿಕೊಂಡು ಕಾಲ್ನಡೆಯಾಗಿ ಹೋದನು. ದೇವಸ್ಥಾನದ ಮುಂದುಗಡೆಯ ಬಾಕಿಮಾರು ಗದ್ದೆಯಲ್ಲಿ ಗಾಯಗೊಂಡು ಬಿದ್ದಿದ್ದ ಕೋಟಿ. ಅವನ ಕಡೆಗಾಲದ ಸೇವೆ ಮಾಡುತ್ತಲಿದ್ದ ಚೆನ್ನಯ. ಇವರಿಬ್ಬರ ಹಿಂದುಗಡೆಯಲ್ಲಿ ಪಶ್ಚಾತ್ತಾಪದ ಮುಖಮುದ್ರೆಯಿಂದ ಮಾತಿಲ್ಲದೆ ನಿಂತಿದ್ದ ಪೆರುಮಾಳ ಬಲ್ಲಾಳ– ಈ ಮೂವರನ್ನು ಕಂಡನು. ಉಭಯ ಪಕ್ಷದ ಅನೇಕ ಸೈನಿಕರು ರಣರಂಗದಲ್ಲಿ ಮಡಿದು ಬಿದ್ದಿದ್ದರು. ಉಳಿದವರು ಪ್ರಾಣವನ್ನು ಕೈಯಲ್ಲಿ ಹಿಡಿದುಕೊಂಡು ಓಡಿಹೋಗಿದ್ದರು.

ಇತ್ತ ಕೋಟಿಯ ಮೈ ರಕ್ತದ ಪ್ರವಾಹದಲ್ಲಿ ಪ್ರಾಣವು ತೇಕುಮುಳುಗುತ್ತಲಿತ್ತು. ದೇವ ಬಲ್ಲಾಳನೂ ಪೆರುಮಾಳ ಬಲ್ಲಾಳನೂ ಆತನ ಒಂದೊಂದು ಪಕ್ಕದಲ್ಲಿ ಕುಳಿತುಕೊಂಡು ಒಂದಿಷ್ಟು ಕೆಂದಾಳೆ ನೀರನ್ನು ಆತನ ಬಾಯಿಗೆ ಹೊಯ್ದರು. ಕೋಟಿಯು ಆ ಇಬ್ಬರು ಬಲ್ಲಾಳರ ಕೈಗಳನ್ನು ತನ್ನ ಕೈಗಳಿಂದ ಜೋಡಿಸಿ ಬಿಗಿಹಿಡಿದು "ಮುಂದೆ ನೀವು ಕೈಗೂಡಿ ಬದುಕುವುದು ಒಳ್ಳೆಯದು" ಎಂದು ಹೇಳಿ, ಕಣ್ಣುಮುಚ್ಚಿದನು; ಮುಚ್ಚಿದ ಕಣ್ಣು ಮತ್ತೆ ತೆರೆಯಲೇ ಇಲ್ಲ.

ಕೋಟಿಯು ಪರಂಧಾಮಕ್ಕೆ ಹೋಗುವುದನ್ನು ಕಂಡು ಚೆನ್ನಯನು "ಅಣ್ಣಾ! ನಿಮ್ಮನ್ನು ಬಿಟ್ಟು ನಾನೇತಕ್ಕೆ ಬಾಳಲಿ? ಹುಟ್ಟುವಾಗ ಒಟ್ಟಿಗೆ ಹುಟ್ಟಿದವರು ಹೋಗುವಾಗ ಒಟ್ಟಿಗೆ ಹೋಗಬೇಕಷ್ಟೆ. ಅಣ್ಣಾ, ನಾನು ನಿಮ್ಮ ಬೆನ್ನ ಹಿಂದೆಯೇ ಬಂದೆ" ಎಂದು ಹೇಳಿ, ಆ ದೇವಸ್ಥಾನದ ಮುಂದುಗಡೆಯಲ್ಲಿದ್ದ ಬಾವಿಯ ಬಾಯಿಕಲ್ಲಿಗೆ ತನ್ನ ತಲೆಯನ್ನು ತಾಟಾಡಿಸಿದನು. ಆತನ ಆತ್ಮವೂ ಪಂಚಭೂತಗಳಲ್ಲಿ ಲೀನವಾಯಿತು. ಕೂಡಲೇ ಆ ಶಿವಾಲಯದ ಒಳಗೆ ಉರಿಯುತ್ತಿದ್ದ ದೀಪಗಳೆಲ್ಲಾ ತಮ್ಮಷ್ಟಕ್ಕೆ ಆರಿ ಹೋದುವು. ಒಂದು ಗಳಿಗೆಯ ತನಕ ಗುಡುಗುಮಿಂಚುಗಳು ತೋರಿದುವು. ಒನಕೆಯ ಧಾರೆಯಲ್ಲಿ ಮಳೆ ಹೊಯ್ದು ತಟ್ಟನೆ ತಾನಾಗಿ ನಿಂತು ಹೋಯಿತು.

ದೇವ ಬಲ್ಲಾಳನು "ಹಾ! ಹಾ! ವಿಧಿಯೇ ಇಂದಿಗೆ ನನ್ನ ರಾಜ್ಯದಲ್ಲಿದ್ದು ನನ್ನನ್ನು ಕಾಪಾಡಿದ ಆನೆಗಳೇ ಬಿದ್ದುಹೋದುವಲ್ಲಾ!" ಎಂದು ಮಮ್ಮಲ ಮರುಗಿದನು. ಆ ಎರಡು ಶವಗಳನ್ನು ಅಲಂಕರಿಸಿ, ತಾನು ತಂದಿದ್ದ ಪಲ್ಲಕ್ಕಿಗಳಲ್ಲಿ ಇರಿಸಿ, ಮಹಾಸಂಭ್ರಮದಿಂದ ಮೆರವಣಿಗೆ ಮಾಡಿಸಿ, ಬೀಡಿಗೆ ಕೊಂಡುಬಂದನು. ಮರುದಿನ ಹದಿನೆಂಟು ಪೇಟೆಯವರೂ ಒಂದುಗೂಡಿ ಜಾತಿವಿಧಿಗೆ ಅನುಸಾರವಾಗಿ ಶವಸಂಸ್ಕಾರವನ್ನು ನಡೆಸಿದರು.



ಯಾವ ಹೊತ್ತಿಗೆ ಕೋಟಿಯ ಆತ್ಮವು ಕಾಯವನ್ನು ಬಿಟ್ಟು ಹೋಯಿತೋ ಆ ವೇಳೆಗೆ ಸರಿಯಾಗಿ ಪಡುಮಲೆಯ ಬೀಡಿಗೆ ಬೆಂಕಿ ಬಿದ್ದು ಅದು ಸುಟ್ಟು ಬೂದಿಯಾಯಿತು.

ಎಣ್ಮೂರು ದೇವ ಬಲ್ಲಾಳನು ಕೋಟಿ ಚೆನ್ನಯರನ್ನು ಸುಟ್ಟು ಶುದ್ಧ ಮಾಡಿಸಿದ ಸ್ಥಳಗಳಲ್ಲಿ ಅವರ ಸಮಾಧಿಗಳನ್ನು ಕಟ್ಟಿಸಿ, ಗರಡಿಗಳನ್ನು ಏರ್ಪಡಿಸಿದನು. ಪೆರುಮಾಳ

ಬಲ್ಲಾಳನು ಪಡುಮಲೆಗೆ ಹಿಂದೆರಳಿ ಅಲ್ಲಿ ಹೊಸ ಬೀಡನ್ನು ಕಟ್ಟಿಸಿ, ಕೋಟಿ ಚೆನ್ನಯರ ಕಂಬಳದ ಗದ್ದೆಯ ಬಳಿಯಲ್ಲಿಯೇ ಅವರ ಗುಡಿಗಳನ್ನು ಅಂದವಾಗಿ ಮಾಡಿಸಿದನು. ಅಲ್ಲಿ ಅವರ ವಿಗ್ರಹಗಳನ್ನು ಪ್ರತಿಷ್ಠೆ ಮಾಡಿ ತಾನು ಬದುಕಿರುವಷ್ಟು ಕಾಲ ದಿನಕ್ಕೆ ಮೂರು ಸಲ ಆ ಮೂರ್ತಿಗಳ ದರ್ಶನಕ್ಕೆ ಹೋಗಿಬರುತ್ತಿದ್ದನು.

**– ಪಂಜೆ ಮಂಗೇಶ ರಾವ್**

- ❒ ಕೋಟಿ ಚೆನ್ನಯ ಕಥೆಯ ಯಾವುದಾದರೊಂದು ಘಟನೆಯನ್ನು ಆಯ್ದುಕೊಂಡು ಸಂಭಾಷಣೆಯನ್ನು ಬರೆಯಿರಿ. ತರಗತಿಯಲ್ಲಿ ಅಭಿನಯಿಸಿರಿ.
- ❒ ತುಳುನಾಡಿನ ವೀರರಾಗಿದ್ದು, ದೈವಗಳಾಗಿ ಪೂಜಿಸಲ್ಪಡುವ ಇತರರ ಮಾಹಿತಿ ಸಂಗ್ರಹಿಸಿ ಬರೆಯಿರಿ.
- ❒ ಕಾಸರಗೋಡಿನಲ್ಲಿ ಪ್ರಚಾರದಲ್ಲಿರುವ ಜನಪದ ಕಲೆಗಳ ಪಟ್ಟಿ ತಯಾರಿಸಿರಿ.

    ಚೆನ್ನು ಕುಣಿತ

    ಒಪ್ಪನ

    ................

    ................

    ................

    ................

- ❒ ಕೆಳಗಿನ ಕತೆಯಲ್ಲಿ ಕ್ರಿಯೆಗಳನ್ನು ಸೂಚಿಸುವ ಪದಗಳನ್ನು ಆರಿಸಿ ಬರೆಯಿರಿ.

ಕಾಡಿನ ಮಧ್ಯಭಾಗದಲ್ಲಿ ಒಂದು ಹಾವು ವಾಸಿಸುತ್ತಿತ್ತು. ಒಂದು ದಿನ ತನ್ನ ತಲೆಯನ್ನು ಹಿಂದಕ್ಕೆ ತಿರುಗಿಸಿದಾಗ ಅದರ ಬಾಲ ಹೇಳಿತು. “ಹೇ ತಲೆಯೇ ನೀನು ಮಾತ್ರ ಯಾವಾಗಲೂ ಮುಂದೆ, ನಾನು ಹಿಂದೆ ಉಳಿದಿರಬೇಕೆ, ಇದು ಯಾವ ನ್ಯಾಯ?” ಆಗ ತಲೆ ನುಡಿಯಿತು. “ಬಾಲವೇ! ನಿನಗೆ ಕಣ್ಣು ಇಲ್ಲ. ಹೇಗೆ ಮುಂದೆ ಹೋಗಬಲ್ಲೆ?”ಬಾಲಕ್ಕೆ ಸಿಟ್ಟು ಬಂತು. ಸಮೀಪದ ಗಿಡಕ್ಕೆ ಗಟ್ಟಿಯಾಗಿ ಸುತ್ತುಹಾಕಿಕೊಂಡಿತು. ತಲೆಗೆ ಒಂದು ಅಂಗುಲ ಕೂಡಾ ಮುಂದಕ್ಕೆ ಸರಿಯಲು ಆಗಲಿಲ್ಲ. ತಲೆಗೆ ಬುದ್ಧಿ ಬಂದಿತು. ಅದು “ಆಗಲಿ ನೀನೇ ಬಲಶಾಲಿ, ನೀನೇ ಮುಂದೆ ಹೋಗು ನಾನು ಹಿಂದಿರುತ್ತೇನೆ” ಎಂದಿತು.

ಬಾಲವು ಗೆದ್ದ ಹುಮ್ಮಸಿನಲ್ಲಿ ಮುಂದುವರಿಯಿತು. ಕಣಿವೆಯಲ್ಲಿ ಜಾರಿ ಬಿತ್ತು. ಹಾವು ಕಲ್ಲು ಬಂಡೆಗೆ ಅಪ್ಪಳಿಸಿ ಸತ್ತು ಬಿದ್ದಿತು.

**ಕ್ರಿಯೆಯನ್ನು ಸೂಚಿಸುವ ಪದಗಳು**

ವಾಸಿಸುತ್ತಿತ್ತು

ಹೇಳಿತು

................

................


................

## ಬೀರು ಕಲ್ಕುಡ

ಓ ಡೆನ್ನ ಡೆನ್ನಾನ ಡೆನ್ನ ಡೆನ್ನಾನ ಡೆನ್ನೇ ಡೆನ್ನಾನಯೇ.....
ಅಚ್ಚವರು ಹುಟ್ಟಿದ ನಾಡು ಕೆಲ್ಲತ್ತಮಾರ್ನಾಡು
ತಾಯಿಯೆಂದರೆ ಈರವದಿ ಅಚ್ಚವದಿ
ತಂದೆಯೆಂದರೆ ಶಂಭು ಕಲ್ಕುಡ
ಅವರಿಗೆ ಐವರು ಮಕ್ಕಳು ಐವರಿಗೊಬ್ಬಳು ತಂಗಿ
ಅವರ ಹೆಸರು ಕೇಳಬೇಕು ಎಲ್ಯಣ್ಣಚ್ಚವ ಮಲ್ಲಣ್ಣಚ್ಚವ
ಬೀರು ಬಿಕುರು ನಂದು ತಂಗಿ ಕಾಳಮ್ಮನೆಂದು ಕರೆದರು
ಐವರು ಮಕ್ಕಳಿಗೆ ಐದು ಬಿನ್ನಾಣದ ಕೆಲಸ
ಒಬ್ಬನಿಗೆ ಮರದ ಕೆಲಸ ಒಬ್ಬನಿಗೆ ಬಂಗಾರದ ಕೆಲಸ
ಒಬ್ಬನಿಗೆ ಕಬ್ಬಿಣದ ಕೆಲಸ ಒಬ್ಬನಿಗೆ ತಾಮ್ರದ ಕೆಲಸ
ಒಬ್ಬನಿಗೆ ಕಲ್ಲಿನ ಕೆಲಸ
ಮರದ ಕೆಲಸ  ಕಲಿತವನು ಮಲೆನಾಡಚ್ಚವ
ಬಂಗಾರದ ಕೆಲಸ ಕಲಿತವನು ಯಾರಣ್ಣ
ಕಬ್ಬಿಣದ ಕೆಲಸ ಕಲಿತವನು ಕರ್ಬೊಟಿಗಾರ
ತಾಮ್ರದ ಕೆಲಸ ಕಲಿತವನು ಚೆಂಬುಟಿಗಾರ
ಕಲ್ಲಿನ ಕೆಲಸ ಕಲಿತವನು ಕಲ್ಕುಡ
ಬೀರು ಕಲ್ಕುಡನ ಒಡಹುಟ್ಟಿದವಳು ಕಾಳಮ್ಮ
ಮಡದಿಯ ಬಸುರಿಗೆ ಏಳು ತಿಂಗಳಾಗುವಾಗ
ಶಂಭು ಕಲ್ಕುಡನಿಗೆ ಬೇಲೂರು ಬೆಳ್ಗೊಳಗಳಿಂದ ಬಂತು
ಅಂತರಂಗದ ಓಲೆ ಬಹಿರಂಗದ ಆಳು

ಶಂಭು ಕಲ್ಕುಡ ಮನೆ, ಮಡದಿಗೆ ಬೇಕಾದ ಏರ್ಪಾಡುಗಳನ್ನು ಮಾಡಿ ಶ್ರವಣಬೆಳಗೊಳದ ಅರಸರಲ್ಲಿಗೆ ಹೋಗುತ್ತಾನೆ. ಅರಸರ ಅಪ್ಪಣೆಯಂತೆ ಸಾವಿರ ಕಂಬದ ಬಸದಿ ಮತ್ತು ಗೋಮಟೇಶ್ವರನ ಕೆತ್ತನೆಯ ಕೆಲಸವನ್ನು ಪೂರೈಸುತ್ತಾನೆ.

ನಾನು ಬಂದು ಬಹುಕಾಲವಾಯಿತು
ತುಂಬಿದ ಬಸುರಿಯನ್ನು ಬಿಟ್ಟು ಬಂದಿದ್ದೇನೆ
ನನ್ನ ರಾಜ್ಯಕ್ಕೆ ಹೋಗುವೆನೆಂದ ಶಂಭು ಕಲ್ಕುಡ
ಅಷ್ಟು ಮಾತು ಕೇಳಿದರು ಅರಸು ಬಾಯಿ ತುಂಬಾ ಹೊಗಳಿದರು
ಉಂಬಳಿ ಉತ್ತಾರ ಬಿಟ್ಟರು ಹಾಲಿಗೆ ಹಸುವನ್ನಿತ್ತರು
ಬಂಗಾರದ ಬಳೆ ಮುಂಗೈ ಸರಪಳಿ ಕೊಟ್ಟರು
ಹೆಗಲು ತುಂಬ ಹಚ್ಚಡ ಬಾಯಿತುಂಬ ವೀಳ್ಯ ಕೊಟ್ಟರು
ಬಹುಮಾನದೊಡನೆ ತನ್ನೂರಿಗೆ ಹೊರಟ ಶಂಭು ಕಲ್ಕುಡ
ಆ ಸಮಯದಲ್ಲಿ ಕೆಲ್ಲತ್ತಮಾರ್ನಾಡಿನಲ್ಲಿ ಈರವದಿಯ ಮಕ್ಕಳು
ಬಳೆದು ದೊಡ್ಡವರಾದರು ಕೊನೆಯ ಅವಳಿಮಕ್ಕಳು
ಬೀರು ಕಲ್ಕುಡ ಕಾಳಮ್ಮ ಸಣ್ಣ ಪ್ರಾಯದಲ್ಲಿ ದೊಡ್ಡ ಬಳವಿ ಬಳೆದರು
ಸಮಪ್ರಾಯದ ಮಕ್ಕಳೊಂದಿಗೆ ಆಟಕ್ಕೆ ಹೋದ ಬೀರು
ತಂದೆಯಿಲ್ಲದ ಮಗನೆಂದು ಕಲೆ ಹೇಳಿ ಕುಲದೂಷಣೆ ಮಾಡಿದರು
ಮನೆಗೆ ಬಂದು ನನಗೆ ತಂದೆಯಿಲ್ಲವೇ ಎಂದು ಕೇಳಿದ
ಅಯ್ಯಯ್ಯೋ ಮಗ ನಿನ್ನಪ್ಪ ನನ್ನನ್ನು ಏಳು ತಿಂಗಳ ಬಸುರಿಯನ್ನು
ಬಿಟ್ಟು ಬೇಲೂರು ಬೆಳ್ಗೊಳಕ್ಕೆ ಕೆಲಸಕ್ಕೆಂದು ಹೋಗಿದ್ದಾರೆ ಮಗ
ಎಂದಳು ತಾಯಿ ಈರವದಿ
ನನ್ನ ತಂದೆಯನ್ನು ಹುಡುಕಲು ಹೋಗಬೇಕೆಂದ
ತಂದೆಗೈದ ಗೈಮೆ ನೋಡಬೇಕು ನಾನೂ ಮಾಡಬೇಕು ಎಂದ
ಯಾರೋ ಮಗು ಬೀರು ಕೇಳದೆಯೆ ನೀನು ಸಣ್ಣವ ಹೋಗಿ ದೊಡ್ಡವನಾಗಲಿಲ್ಲ
ನಿನ್ನ ನೆತ್ತಿಯ ಎಣ್ಣೆ ಜಿಡ್ಡು ಆರಲಿಲ್ಲ
ಕಾಲಿನ ಅರಸಿನ ಮಾಸಲಿಲ್ಲ ಎಂದಳು ಈರವದಿ
ನನಗೆ ಹೋಗದೆ ಸಲ್ಲದು ಎಂದು ಚಲ ಹಿಡಿದ ಬೀರು
ಮರುದಿನ ಮುಂಜಾನೆ ಎದ್ದ
ತಂಗುಳನ್ನ ಉಂಡ ಮೊಸರನ್ನದ ಬುತ್ತಿ ಕಟ್ಟಿದ
ಪಯಣದ ಉಡುಗೆ ತೊಟ್ಟ ಹೊರಪಯಣ ಹಿಡಿದ



ಹೀಗೆ ತಂದೆಯನ್ನು ಹುಡುಕುತ್ತಾ ಹೊರಟ ಬೀರ ಕಲ್ಕುಡನಿಗೆ ಶಂಭು ಕಲ್ಕುಡ ಎದುರಾಗುತ್ತಾನೆ. ತಂದೆ ಮಕ್ಕಳಿಗೆ ಪರಸ್ಪರ ಪರಿಚಯವಾಗುತ್ತದೆ. ಬೀರು ಕಲ್ಕುಡ ತಂದೆಯ ಕೆಲಸ ನೋಡಬೇಕೆಂದು ಹಟಹಿಡಿದುದರಿಂದ ಇಬ್ಬರೂ ಶ್ರವಣಬೆಳಗೊಳಕ್ಕೆ ಬರುತ್ತಾರೆ. ಬೀರು ಕಲ್ಕುಡ ಗೋಮಟೇಶನ ಮೂರ್ತಿಯನ್ನು ನೋಡಿ ಅದರಲ್ಲಿ ಕೊರತೆಯನ್ನು ಕಾಣುತ್ತಾನೆ. ಇದರಿಂದ ನೊಂದ ಶಂಭು ಕಲ್ಕುಡ ಚೂರಿಯಿಂದ ತನ್ನ ಹೊಟ್ಟೆಯನ್ನು ಸೀಳಿ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. ಬೀರು ಕಲ್ಕುಡ ತುಳುನಾಡಿಗೆ ಹಿಂತಿರುಗುತ್ತಾನೆ. ಕಾರ್ಕಳದ ಅರಸರು ಅವನಿಗೆ ಗೊಮ್ಮಟನ ಪ್ರತಿಮೆ ನಿರ್ಮಿಸುವಂತೆ ಹೇಳುತ್ತಾರೆ.

ಆಗಬಹುದು ಅರಸುಗಳೆ ಎಂದ ಕಲ್ಕುಡ
ಪಡಿಯಕ್ಕಿ ಪಡೆದ ಬಿಡಾರ ಸೇರಿದ
ಮರುದಿನ ಮುಂಜಾನೆ ಎದ್ದ
ನಾಲ್ಕು ಕಡೆಯ ದೇವರ್ಕಳನ್ನು ನೆನೆದ ಕೆಲಸಕ್ಕೆ ತೊಡಗಿದ ಕಲ್ಕುಡ
ಬಸದಿಯ ಕೆಲಸಗೈದ ನೂರಿಪ್ಪತ್ತು ಬೊಂಬೆಗಳ ಕೆಲಸಗೈದ
ಒಂಬತ್ತು ದೇವರ್ಕಳ ಕೆಲಸಮಾಡಿದ
ಗುಮ್ಮಟಸ್ವಾಮಿಯ ಕೆಲಸಮಾಡಿದ
ನಿಮಗಾಗುವ ಕೆಲಸವಾಯಿತು ಒಡೆಯ ನನಗಾಗುವ ಬಹುಮಾನ ಕೊಡಿರೆಂದ
ಇಂದೀಗ ಮುಸ್ಸಂಜೆಯ ಹೊತ್ತಾಯಿತು ಕಲ್ಕುಡ
ನಾಳೆಯ ದಿನ ಬಾರೆಂದರು
ಮರುದಿನ ಹೋದ ಕಲ್ಕುಡ
ನನ್ನ ರಾಜ್ಯದಲ್ಲಿ ಕೆಲಸಗೈದ ಕಲ್ಕುಡ
ಬೇರೆ ರಾಜ್ಯದಲ್ಲಿ ಕೆಲಸಗೈಯಬಾರದೆಂದರು ಬೈರಸೂಡ
ಬಲಗೈಗೆ ಬಂಗಾರದ ಬಳೆ ತೊಡಿಸಿದರು ಎಡದ ಕೈ ತುಂಡರಿಸಿದರು
ಎಡದ ಕಾಲಿಗೆ ಕಡಗವಿಕ್ಕಿದರು ಬಲಗಾಲು ತುಂಡರಿಸಿದರು
ಕಡಿದ ಕೈಗೆ ಅಂಡೆ ಹಾಕಿಸಿದರು ಕಾಲಿಗೆ ಗುತ್ತಿ ಹಾಕಿಸಿದರು

ಈ ಅನ್ಯಾಯದಿಂದ ರೋಷಗೊಂಡ ಬೀರು ಕಲ್ಕುಡ ವೇಣೂರು ಅರಸರಲ್ಲಿಗೆ ಹೋಗಿ ಛಲದಿಂದ ಗೋಮಟೇಶ್ವರನ ಮೂರ್ತಿಯನ್ನು ನಿರ್ಮಿಸುತ್ತಾನೆ. ಆ ಸಮಯಕ್ಕೆ ತಂಗಿ ಕಾಳಮ್ಮ ಬೀರುವನ್ನು ಹುಡುಕುತ್ತಾ ವೇಣೂರಿಗೆ ಬರುತ್ತಾಳೆ. ಬೀರು ಕಲ್ಕುಡನನ್ನು ಕಾಣುತ್ತಾಳೆ.

ಅಣ್ಣನ ಮಡಿಲಿಗೆ ಬಿದ್ದಳು
ನಿನ್ನ ಕೈಯೇನಾಯಿತು ಅಣ್ಣಾ ನಿನ್ನ ಕಾಲೇನಾಯಿತು ಅಣ್ಣಾ ಎಂದಳು
ಯಾರಮ್ಮ ತಂಗಿ ಕೇಳಿದೆಯಾ
ಕದ್ದು ಅಲ್ಲ ಸುಳ್ಳಾಡಿ ಅಲ್ಲ ತಂಗಿ
ಮಾಡಲಾಗದ ಕೆಲಸಗೈದೆ ಕೊಡಬಾರದ ಬಹುಮಾನ ಕೊಟ್ಟರು ಎಂದ
ಅಣ್ಣನ ಮಡಿಲಿಂದ ಮೈಕೊಡವಿ ಎದ್ದಳು ಕಾಳಮ್ಮ
ಕಾಣುವಂತೆ ಗಾಸಿಗೈದ ಅರಸನನ್ನು ಮಾಯದಲ್ಲಿ ಹೋಗಿ ನೋಡಬೇಕು
ಜೋಗ ಬಿಟ್ಟು ಮಾಯಕ್ಕೆ ಸೇರುವ ಎಂದಳು
ಮೂರು ಸುತ್ತು ಬಂದರು ಮೂರು ಸಲ ಅರಚಿದರು
ಮಾದೇವರ ಅಂಗಳದಲಿ ಮಾಯಕವಾದರು

ಅನಂತರ ಅಣ್ಣತಂಗಿ ಭೂತಗಳಾಗಿ ಮಾಯದಲ್ಲಿ ಕಾರ್ಕಳದ ಅರಸನನ್ನು ಕಾಡತೊಡಗುತ್ತವೆ. ಅವುಗಳನ್ನು ನಿಯಂತ್ರಿಸಲು ಉಬಾರದ (ಉಪ್ಪಿನಂಗಡಿ) ವೈಲಾಯರು ಮುಂದೆ ಬರುತ್ತಾರೆ. ಅವರು ನೇಮ ಉತ್ಸವ ಕೊಡಿಸುತ್ತೇವೆ ಎಂದು ಭೂತಗಳೊಡನೆ ಅರಿಕೆ ಮಾಡುತ್ತಾರೆ. ಅದಕ್ಕೊಪ್ಪಿದ ಭೂತಗಳನ್ನು ವೈಲಾಯರು (ಮಂತ್ರ–ತಂತ್ರದಿಂದ ಬಂಧಿಸಿ) ಉಬಾರಿಗೆ ಕರೆತರುತ್ತಾರೆ. ಭೂತಗಳಿಗೆ ಕೊಟ್ಟಿಗೆ ಕಟ್ಟಿಸುತ್ತಾರೆ. ನೈವೇದ್ಯ ಅರ್ಪಿಸುತ್ತಾರೆ. ನೇಮ ಉತ್ಸವ ನಡೆಸುತ್ತಾರೆ. ಪೂಜೆಗಳನ್ನು ನಡೆಸಿಕೊಂಡು ಬರುತ್ತಾರೆ.

**ಕನ್ನಡಕ್ಕೆ – ಅಮೃತ ಸೋಮೇಶ್ವರ**

- ❐ ಮೇಲೆ ಕೊಟ್ಟಿರುವ ಪದ್ಯಭಾಗವು ತುಳು ಪಾಡ್ದನದ ಕನ್ನಡ ಅನುವಾದವಾಗಿದೆ. ಅದರೊಂದಿಗೆ ಇರುವ ವಿವರಣೆಯನ್ನು ಓದಿ ಕಥೆಯನ್ನು ಸಂಕ್ಷಿಪ್ತವಾಗಿ ಬರೆಯಿರಿ.
- ❐ ಬೀರು ಕಲ್ಕುಡನ 'ಕೈ ಕಾಲು ಕತ್ತರಿಸಿದುದು' ಸರಿಯೇ? ಚರ್ಚಿಸಿ ಲೇಖನ ತಯಾರಿಸಿ.
- ❐ ಕೋಟಿ ಚೆನ್ನಯ ಕಥೆಯೊಂದಿಗೆ 'ಬೀರು ಕಲ್ಕುಡ' ಕಥೆಯನ್ನು ಹೋಲಿಸಿ ಟಿಪ್ಪಣಿ ಬರೆಯಿರಿ.

## ಮುಸ್ಲಿಂ ಜಾನಪದ

ಕಾಸರಗೋಡು ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ವಿವಿಧೆಡೆಗಳಲ್ಲಿ ಕಂಡು ಬರುವ ಬ್ಯಾರಿ ಸಮುದಾಯದವರಲ್ಲಿ ವಿಶಿಷ್ಟವಾದ ಹಾಡು, ಕುಣಿತಗಳಿವೆ. ಇವರಲ್ಲಿ ಮದುವೆಯ ಸಂಭ್ರಮದಲ್ಲಿ ಹೆಂಗಸರ ಪಾಲು ಅತ್ಯಂತ ಹಿರಿದು. ಮದುಮಗಳ ಕೈಗೆ ಮದರಂಗಿ ಇಡುವಾಗ 'ಮಯಿಲಾಂಜಿ ಪಾಟ್ಟು', 'ಕೈಕೊಟ್ಟು ಪಾಟ್ಟುಗಳು', ಮದುವೆಯ ವಿವಿಧ ಹಂತಗಳಲ್ಲಿ ಹಾಡುವ 'ಒಪ್ಪನ ಪಾಟ್ಟು', 'ತಿರುಕಲ್ಯಾಣ ಪಾಟ್ಟು' ಹೆಚ್ಚುಕಮ್ಮಿ ಎಲ್ಲ ಮಹಿಳೆಯರಿಗೂ ಗೊತ್ತು. ರಾಗವಾಗಿ ಇಂಪಾಗಿ ಹಾಡಬಲ್ಲ ಮಹಿಳೆಯರು ಹಾಡತೊಡಗಿದರೆ ಉಳಿದವರು ಹಾಡಿನ ತಾಳಕ್ಕೆ ಸರಿಯಾಗಿ ಚಪ್ಪಾಳೆ ತಟ್ಟುತ್ತಾರೆ. 'ಒಪ್ಪನ ಪಾಟ್ಟು' ಹಾಡುವಾಗ ಚಿಕ್ಕ ಹುಡುಗಿಯರು ಕುಣಿಯುವುದೂ ಇದೆ. ಇದು ಬಹಳ ಅಪರೂಪಕ್ಕೆ. ಇವಲ್ಲದೆ ಮದುಮಗನನ್ನು ಲೇವಡಿ ಮಾಡುವ ಹಾಡುಗಳು, ಮದುಮಗಳನ್ನು ಕೀಟಲೆ ಮಾಡುವ



ಹಾಡುಗಳೂ ಇವೆ. ಆದರೆ ಹೆಚ್ಚಿನ ಹಾಡುಗಳೆಲ್ಲವೂ ಕೇರಳದ ಮಾಪ್ಪೆಪಾಟ್ಟುಗಳಾದ್ದರಿಂದ ಮಲೆಯಾಳದಲ್ಲಿರುತ್ತವೆ. ಬ್ಯಾರಿ ಭಾಷೆಗೆ ವಿಶಿಷ್ಟವಾದ ಹಾಡುಗಳ ಸಂಖ್ಯೆ ಕಮ್ಮಿಯಾದರೂ ಸಾಕಷ್ಟು ಸಂಖ್ಯೆಯಲ್ಲಿವೆ.

ಬ್ಯಾರಿ ಗಂಡಸರು ಮದುವೆಯ ಸಮಾರಂಭದಲ್ಲಿ ಸ್ಥಳೀಯ ಕೋಲಾಟವನ್ನು ಹೋಲುವ 'ಕೋಲ್‌ಕಳಿ', ತಮ್ಮಟೆಯನ್ನು ಬಡಿಯುತ್ತಾ ಹಾಡುವ 'ದಫ್ ಕುಣಿತ', ಕತ್ತಿವರಸೆಯ 'ತಾಲೀಮ್ ಕಳಿ' ಮುಂತಾದ ಹಾಡು, ಕುಣಿತ ಕಸರತ್ತುಗಳಲ್ಲಿ ಭಾಗವಹಿಸುತ್ತಾರೆ. ಇಂತಹ ಹಾಡುಗಳಲ್ಲಿ ಹೆಚ್ಚಿನವು ಮಲೆಯಾಳದಲ್ಲಿವೆ. ಈ ಮಾಪ್ಪೆಪಾಟ್ಟುಗಳಲ್ಲಿ ಹೆಚ್ಚಿನ ಹಾಡುಗಳು ಪೈಗಂಬರರ ಬದುಕಿನ ಅನೇಕ ಘಟನೆಗಳ ವಿವರಗಳನ್ನೊಳಗೊಂಡವುಗಳಾಗಿವೆ. ಇವುಗಳಲ್ಲದೆ ಅಜ್ಜಿ ಕಥೆಗಳಂತೆ ಕಾಣುವ 'ಖಿಸ್ಸಾ ಪಾಟ್ಟು'ಗಳು ಅತ್ಯಂತ ಜನಪ್ರಿಯವಾಗಿವೆ. ಇವಲ್ಲದೆ ಭಕ್ತಿಯಿಂದ ಪಾರಾಯಣ ಮಾಡುವ ಪೈಗಂಬರರ ಜೀವನ ಚರಿತ್ರೆ, ಸೂಫಿ–ಸಂತರುಗಳ ಜೀವನಚರಿತ್ರೆಯನ್ನೊಳಗೊಂಡ 'ಮೌಲೂದ್'ಗಳು (ಅರಬಿ ಭಾಷೆಯಲ್ಲಿವೆ), ಮಾಲೆಗಳು (ಮಲೆಯಾಳಂ ಭಾಷೆಯಲ್ಲಿವೆ) ಇವೆ. ಇವುಗಳು ಮಾಪ್ಪೆಗಳ ಸಾಂಸ್ಕೃತಿಕ ಜೀವನದ ಪ್ರಮುಖ ಭಾಗಗಳಾಗಿವೆ.

ಬ್ಯಾರಿ ಸಮುದಾಯದ ಕೆಲವು ಜನಪದ ಹಾಡುಗಳು ಬಾಯಿಯಿಂದ ಬಾಯಿಗೆ ಹರಡುತ್ತಾ ಇಂದಿಗೂ ಬದುಕಿ ಉಳಿದಿವೆ. ಅವುಗಳಲ್ಲಿ ಮಕ್ಕಳ ಹಾಡುಗಳು ಮುಖ್ಯ. ಒಂದು ಮಕ್ಕಳ ಹಾಡನ್ನು ಇಲ್ಲಿ ಕೊಡಲಾಗಿದೆ.

"ಅವುಲಿಯಾ ಸಾಹೇಬು
ಜವುಲಿ ಎಡುತ್ತು
ಬಂಟ್ವಾಳ ಪೇಂಟೇಲಿ
ತಂಬಾಡಿಚ್ಚಿ"
(ಸಂತ ಸಾಹೇಬರು
ಜವುಳಿ ಖರೀದಿಸಿ
ಬಂಟ್ವಾಳ ಪೇಟೆಯಲ್ಲಿ
ತಳ ಊರಿದರು)


**– ಫಕೀರ್ ಮಹಮ್ಮದ್ ಕಟಪಾಡಿ**

- ❒ ಮೇಲಿನ ಲೇಖನವನ್ನು ಓದಿ ಪ್ರಾದೇಶಿಕ ಜನಪದ ಕಲೆಯೊಂದರ ಕುರಿತಾದ ಪರಿಚಯ ಲೇಖನವನ್ನು ಸಿದ್ಧಪಡಿಸಿರಿ.
- ❒ "ಜನಪದ ಕಲೆಗಳು ಒಂದು ಪ್ರದೇಶದ ಜನರು ಒಟ್ಟು ಸೇರುವುದಕ್ಕೆ ಕಾರಣವಾಗಿವೆ" ಹೇಗೆ? ಪ್ರಬಂಧ ಬರೆಯಿರಿ.

# ಮರೆಯಲಾಗದ ತಾಳಮದ್ದಳೆ

(ಈ ಭಾಗವನ್ನು ಕೀರಿಕ್ಕಾಡು ಮಾಸ್ತರ್ ವಿಷ್ಣುಭಟ್ಟರ ಅನುಭವ ಕಥನ 'ಯಕ್ಷರಸ ಜೀವನ' ದಿಂದ ಆರಿಸಿಕೊಳ್ಳಲಾಗಿದೆ.

ಒಮ್ಮೆ ಮಹಾಲಿಂಗ ರೈ ಎಂಬವರು 'ಕುಂಭಕರ್ಣ ಕಾಳಗ' ಎಂಬ ಯಕ್ಷಗಾನ ಕೂಟ ಒಂದನ್ನು ಏರ್ಪಡಿಸಿದರು. ಅದರಲ್ಲಿ ಕೀರಿಕ್ಕಾಡ್ ಮಾಸ್ತರ್ ವಿಷ್ಣುಭಟ್ಟರು ಶ್ರೀರಾಮನಾಗಿ, ಶಿವಪ್ಪನವರು ಕುಂಭಕರ್ಣನಾಗಿ ಪಾತ್ರವಹಿಸಿದರು. ಹೆಸರಾಂತ ಭಾಗವತ ಪುತ್ತಿಗೆ ರಾಮಕೃಷ್ಣ ಜೋಯಿಸರು ಭಾಗವತರಾಗಿದ್ದರು. ಮಧೂರು ಶಿವನವರು ಮತ್ತು ಕುಂಡಂಕ್ಕೋಳಿ ರಾಮಕೃಷ್ಣನವರು ಚೆಂಡೆಗೆ ಮದ್ದಳೆಗೆ ಲಕ್ಷ್ಮಣಾಚಾರ್ಯರು ಬಂದಿದ್ದರು. ಅಂದಿನ ರಸಮಯ ಸನ್ನಿವೇಶವನ್ನು ಕೀರಿಕ್ಕಾಡು ಮಾಸ್ತರರು ಈ ಭಾಗದಲ್ಲಿ ಸೊಗಸಾಗಿ ವಿವರಿಸಿದ್ದಾರೆ.)



ಶಿವಪ್ಪನವರು ನನ್ನ ಪರಮ ಸ್ನೇಹಿತರು. ರಾಕ್ಷಸ ಪಾತ್ರಕ್ಕೆ ಆರಿಸಿದ ವ್ಯಕ್ತಿ. ಆಗಿನ ಹಳೆಯ ಪದ್ಧತಿಯ ಅರ್ಥದವರು. ದಶಾವತಾರ ಆಟದಲ್ಲಿ ರಾಕ್ಷಸವೇಷ ಹೊರಡುವಂತೆ, ಕ್ರಮಬದ್ಧ ಅರ್ಭಟೆಯಿಂದ ಆರಂಭಿಸುವ ಪದ್ಧತಿಯೂ ಇತ್ತು. ಶಿವಪ್ಪನವರು ಸುಧಾರಿಸಿದ ಅರ್ಥದವರಾದರೂ ಬೇಕಾದಲ್ಲಿ ಅದಕ್ಕೂ ಸಿದ್ಧರೆ. ಒಳ್ಳೇ ಮಾತುಗಾರರೂ ಹೌದು. ಮೇಲಾಗಿ ರಸಿಕರೂ ಕೂಡ. ಅಂತೆಯೇ ನನ್ನಿದಿರು ಕುಂಭಕರ್ಣ ಅವರೇ ಎಂತ ಮಹಾಲಿಂಗ ರೈಗಳು ನಿರ್ಧರಿಸಿ ಪ್ರತ್ಯೇಕವಾಗಿ ಆ ದಿನ ಬರಿಸಲೂ ಕಾರಣ. ಅದನ್ನವರು ಬಾಯಿಬಿಟ್ಟು ಹೇಳದಿದ್ದರೂ ನನಗರ್ಥವಾಗಿತ್ತು. ಅಂತು ಯಕ್ಷಗಾನ ಪ್ರಾರಂಭವಾಯಿತು. ನಗುಮುಖದ ಜೋಯಿಸ ಭಾಗವತರು ಜಾಗಟೆ ಹಿಡಿದು ಮಧ್ಯದಲ್ಲಿ, ಎಡಬಲದಲ್ಲಿ ಎರಡು ಚೆಂಡೆಯ ಮುಂದೆ ಶಿವನವರೂ ರಾಮಕೃಷ್ಣನವರೂ ಒತ್ತಿನಲ್ಲೇ ಮದ್ದಳೆ ಸಹಿತ ಲಕ್ಷ್ಮಣಾಚಾರ್ಯರೂ ಕುಳಿತುದು ಬಹಳ ಸಂಭ್ರಮದ ನೋಟ. ಲಕ್ಷ್ಮಣಾಚಾರ್ಯರು ನಮ್ಮ ಕೂಟಕ್ಕೆ ಹಾಜರಿರುವ ಮದ್ದಳೆಗಾರರು. ಸಭೆಯೂ ಕಿಕ್ಕಿರಿದು ತುಂಬಿತ್ತು.

ಗಜಮುಖನ ಪ್ರಾರ್ಥನೆಯಿಂದ ಕ್ರಮಬದ್ಧವಾಗಿ ಸಮರ್ಥ ಭಾಗವತರ ಹಾಡುವಿಕೆಯಿಂದ, ಕೈಚಳಕದ ಹಿಮ್ಮೇಳದವರ ಚೆಂಡೆಮದ್ದಳೆಗಳ ಝೇಂಕಾರದೊಂದಿಗೆ ಯಕ್ಷಗಾನ ಪ್ರಾರಂಭವಾಯಿತು. ಪ್ರೇಕ್ಷಕರ ಆನಂದಾಭಿಮಾನದ ವೈಭವವೇ ವೈಭವ. ಶ್ರೀರಾಮನ ಪ್ರವೇಶವಾಗಿ ಮುಂದುವರಿದು ರಾವಣ, ಕುಂಭಕರ್ಣನನ್ನು ನಿದ್ದೆಯಿಂದೆಬ್ಬಿಸಿ ಕರೆಸುವಲ್ಲಿಗೆ ತಲಪಿತು. ಭಾಗವತರು ಪದ್ಯ ಪ್ರಾರಂಭಿಸಿ ಜಾಗಟೆಯೆತ್ತಿ ಧಿಗಣಕ್ಕೆ ತೊಡಗಿದರೊ ಇಲ್ಲವೊ, ಆಳುಗಳಿಬ್ಬರು ಕೊಪ್ಪರಿಗೆಯೊಂದನ್ನು ತಂದು, ಕುಂಭಕರ್ಣ ಪಾತ್ರಧಾರಿ ಶಿವಪ್ಪನವರ ತಲೆಗೆ ಮುಚ್ಚಿ ಅತ್ತಿತ್ತ ಮೊಣಕಾಲೂರಿ ಕುಳಿತು ಆಧರಿಸಿ ಹಿಡಕೊಂಡರು. ಒಡನೆಯೇ ಶಿವಪ್ಪನವರ ಅರ್ಭಟೆಯೇ ಅರ್ಭಟೆ.

ಅವರ ಇದಿರಿನಲ್ಲೊಂದು ದೊಡ್ಡ ತಟ್ಟೆ ತುಂಬ ಹುರಿಗಾಳು. ಆರ್ಭಟಿಸುತ್ತಿದ್ದಂತೆಯೇ ಕೊಪ್ಪರಿಗೆಯ ಒತ್ತಡದಿಂದಾಗುವ ಗಣಗಣ ಶಬ್ದ. ಎಂತಹ ಅವಸ್ಥೆಯಿದು ಎಂದು ಎಲ್ಲರಿಗೂ ದಿಗ್ಭ್ರಮೆ! ಆಶ್ಚರ್ಯ! ಹೊತ್ತು ಹೋದಂತೆ ಶಿವಪ್ಪನವರ ಅಟ್ಟಹಾಸ ಸಣ್ಣ ಸಣ್ಣದಾಗುತ್ತ ಬಂತು. ಆಗ ಥಟ್ಟನೆ ನನಗೆ ಅರ್ಥವಾಗಿ ಯಾರ ಮಾತಿಗೂ ಎಡೆಗೊಡದೆ ಕೊಪ್ಪರಿಗೆಯನ್ನು ತೆಗೆಸಿಯೇ ಬಿಟ್ಟೆ. ಅಷ್ಟರಲ್ಲಿಯೇ ಶಿವಪ್ಪನವರು ಕೊಪ್ಪರಿಗೆಯ ಭಾರ, ಒತ್ತಡ ತಾಳಲಾರದೆ ಕುಸಿಯುವಲ್ಲಿಗೆ ಮುಟ್ಟಿದ್ದರು. ಪಾಪ, ಒಳ್ಳೇ ಧೈರ್ಯಶಾಲಿಯಲ್ಲದಿದ್ದರೆ ಅತ್ತೇಬಿಡುತ್ತಿದ್ದರು. ಅಂತು ಹೇಗೋ ಸುಧಾರಿಸಿದರು. ತತ್ಕ್ಷಣವೇ ಇದಿರಿರಿಸಲು ಮರೆತು ಹೋದ ಸೀಯಾಳವೂ ಬಂತು. ಅದು ಮತ್ತೆ ಯಾಕೂ ಅಲ್ಲ. ನಿದ್ದೆಯಿಂದೆದ್ದ ಕುಂಭಕರ್ಣನ ಹೊಟ್ಟೆಯ ಸಂತೃಪ್ತಿಗೆ. ಕುಂಭಕರ್ಣ ಹುರಿಗಾಳು ಮೆದ್ದು ಎಳನೀರು ಕುಡಿದೂ ಆಯಿತು. ಅಷ್ಟಲ್ಲದಿದ್ದರೆ ಶಿವಪ್ಪನವರಿಂದ ಮುಂದೆ ಅರ್ಥ ಹೇಳಲು ಆಗುತ್ತಿರಲಿಲ್ಲವೋ ಏನೋ  ಬಳಿಕ ಪ್ರಾತಃಕಾಲದ ವರೆಗೂ ಯಕ್ಷಗಾನ ಸಾಗಿ ಅಂದಿನ ನೋಟಕರೆಲ್ಲರೂ ಮೆಚ್ಚಿ ತಲೆದೂಗುವಂತೆ ಯಶಸ್ವಿಯಾಗಿ ಮುಕ್ತಾಯವಾಯಿತು. ಮತ್ತೆ ತಿಳಿದಾಗ ಇದೆಲ್ಲ ನನ್ನ ಶಿಷ್ಯ ನರಸಿಂಹನಿಂದಾದ ಕಿತಾಪತಿ ಎಂದು ತಿಳಿಯಿತು.  ಆ ಬೋಳೇ ಸ್ವಭಾವದ ಮಹಾಲಿಂಗ ರೈಗಳಿಗೆ ಕುಂಭಕರ್ಣನ ಪ್ರವೇಶಕ್ಕೆ ಹಾಗಿದ್ದರೆ ಸೈ ಸೈ ಆದೀತು ಎಂತ ಬೋಧಿಸಿ ಅಷ್ಟೂ ವ್ಯವಸ್ಥೆ ಮಾಡಿಸಿದ್ದು ಆತನೇ. ಆದರೆ ಮೊದಲೇ ಶಿವಪ್ಪನವರಿಗೆ ಸೂಚನೆ ಕೊಟ್ಟಿದ್ದರಂತೆ. ಅದೊಂದು ದೊಡ್ಡ ಪುಣ್ಯ.

**– ದಿ। ಕೀರಿಕ್ಕಾಡು ಮಾಸ್ತರು**

- ❒ ಯಕ್ಷಗಾನ ಕಲಾವಿದ ಕೀರಿಕ್ಕಾಡು ಮಾಸ್ತರರ ಆತ್ಮಕಥೆಯ ಭಾಗವನ್ನು ಓದಿದಿರಲ್ಲವೇ? ಈ ಭಾಗದಲ್ಲಿನ ಹಾಸ್ಯ ಪ್ರಸಂಗವನ್ನು ಗುರುತಿಸಿ ಬರೆಯಿರಿ.
- ❒ ತಾಳಮದ್ದಳೆ (ಯಕ್ಷಗಾನ ಕೂಟ) ಮತ್ತು ಯಕ್ಷಗಾನ ಬಯಲಾಟಗಳೊಳಗಿನ ಸಾಮ್ಯ–ವ್ಯತ್ಯಾಸಗಳನ್ನು ಕಂಡುಕೊಳ್ಳಬಹುದಲ್ಲವೇ? ಅವುಗಳನ್ನು ಬರೆಯಿರಿ.

**ಸಾಮ್ಯಗಳು**

ತಾಳಮದ್ದಳೆ – ಬಯಲಾಟ

1. ಹಿಮ್ಮೇಳವಿದೆ
2. 

......................................................

......................................................

......................................................

......................................................

**ವ್ಯತ್ಯಾಸಗಳು**

| ತಾಳಮದ್ದಳೆ | ಬಯಲಾಟ |
|---|---|
| ............................................................ | ............................................................ |
| ............................................................ | ............................................................ |
| ............................................................ | ............................................................ |
| ............................................................ | ............................................................ |

❒ ನಿಮ್ಮ ಪರಿಸರದಲ್ಲಿರುವ ಕಲಾವಿದರಲ್ಲಿ ಒಬ್ಬರನ್ನು ಸಂದರ್ಶಿಸಿ, ಅವರ ಬದುಕು ಮತ್ತು ಕಲಾಜೀವನದ ಮಾಹಿತಿಗಳನ್ನು ಸಂಗ್ರಹಿಸಿ, ಆತ್ಮಕಥೆಯ ರೂಪದಲ್ಲಿ ಬರೆಯಿರಿ.

❖❖❖